**C.C 66/2013 CW 54, PW 29 ದಿನಾಂಕಃ 23-06-2026**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮಧ್ಯಂತರ ಆದೇಶದ ಮೇರೆಗೆ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ**

ದಿಃ 19-09-2011 ರಂದು ಪಂಚರಾದ ಚಾ.ಸಾ 14 ಮತ್ತು 15 ರವರ ಸಮಕ್ಷಮ ಸಕಲೇಶಪುರ ನಗರದ ಕಾರ್ಪೋರೇಷನ್ ಬ್ಯಾಂಕಿಗೆ ಹೋಗಿ ಚಾಸಾ 16 ರವರು ಹಾಜರುಪಡಿಸಿದ ಎರಡು ಬ್ಯಾಂಕ್ ಖಾತೆಗಳ ಹಣ ಡ್ರಾ ಮಾಡಿರುವ ಚೆಕ್ಕುಗಳನ್ನು ಮತ್ತು ಮಾದರಿ ಸಹಿಯ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನ್ನು ಬೆ. 10.20 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಜರುಗಿಸಿರುತ್ತೇನೆ. ನಂತರ ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲುಗಳನ್ನು ಪಿ ಎಫ್ ನಂ. 185/2009 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಿಪಿ 330 ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 330 (ಡಿ) ಎಂದು ಗುರುತಿಸಲಾಯಿತು.

ದಿಃ 23-11-2009 ರಂದು ಮಳಲಿ ಗ್ರಾಮ ಪಂಚಾಯ್ತಿಗೆ ಭೇಟಿ ನೀಡಿ ಪಂಚರಾದ ಚಾಸಾ 17 ಮತ್ತು 18 ರವರ ಸಮಕ್ಷಮ ಚಾಸಾ 1 ರವರು ಹಾಜರುಪಡಿಸಿದ 28 ದಾಖಲಾತಿಗಳನ್ನು ಪರಿಶೀಲನೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಮಹಜರನ್ನು ಬೆ. 11.30 ರಿಂದ ಮಧ್ಯಾಹ್ನ 1.15 ರ ವರೆಗೆ ಜರುಗಿಸಿರುತ್ತೇನೆ. ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲುಗಳನ್ನು ಪಿ ಎಫ್ ನಂ. 186/2009 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಿಪಿ 2 ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2 (ಪಿ) ಎಂದು ಗುರುತಿಸಲಾಯಿತು.

ದಿಃ 05-03-2010 ರಂದು ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಪಂಚರಾದ ಚಾಸಾ 19 ಮತ್ತು 20 ರವರ ಸಮಕ್ಷಮ ಚಾಸಾ 1 ರವರು ಹಾಜರುಪಡಿಸಿದ ಎರಡು ಸೀಲು ಮತ್ತು 100 ರೂಪಾಯಿಯ ಛಾಪಾ ಕಾಗದವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಬೆ. 8.30 ರಿಂದ 9.15 ಗಂಟೆಯವರೆಗೆ ಜರುಸಿರುತ್ತೇನೆ. ಸದರಿ

ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 335 ಎಂದು , ಸಾಕ್ಷಿಯ ಸಹಿಯನ್ನು ನಿಪಿ 335 (ಎ) ಎಂದು ಗುರುತಿಸಲಾಯಿತು.

ದಿ 10-08-2010 ರಂದು ಮಳಲಿ ಗ್ರಾಮ ಪಂಚಾಯ್ತಿಯಲ್ಲಿ ಚಾಸಾ 21 ಮತ್ತು 22 ರವರ ಸಮಕ್ಷಮ ಚಾಸಾ 1 ರವರು ಹಾಜರುಪಡಿಸಿದ ಎರಡು ಪುಸ್ತಕಗಳನ್ನು ಪರಿಶೀಲನೆ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಬೆ. 7.40 ರಿಂದ 8.30 ಗಂಟೆಯವರೆಗೆ ಜರುಸಿರುತ್ತೇನೆ. ಸದರಿ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 312 ಎಂದು ಗುರುತಿಸಲಾಗಿರುತ್ತದೆ.

ದಿಃ 19-05-2010 ರಂದು ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ತಜ್ಞರ ಅಭಿಪ್ರಾಯಕ್ಕಾಗಿ ಬೆಂಗಳೂರಿನ ವಿಧಿ ವಿಜ್ಞಾನಾಲಯಕ್ಕೆ ನಮ್ಮ ಸಿಬ್ಬಂದಿ ಚಾಸಾ 51 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ಸದರಿ ದಾಖಲಾತಿಗಳನ್ನು ಕ್ಯು.ಡಿ 240/2010 ರಂತೆ ಸ್ವೀಕರಿಸಿರುವುದಾಗಿ ಠಾಣೆಗೆ ವರದಿ ಮಾಡಿರುತ್ತಾರೆ.

ಜುಲೈ 2011 ರಂದು ನಾನು ವರ್ಗಾವಣೆಯಾದ ಕಾರಣ ಚಾಸಾ 55 ರವರಿಗೆ ಮುಂದಿನ ತನಿಖೆಗಾಗಿ ಕಡತವನ್ನು ವರ್ಗಾಯಿಸಿರುತ್ತೇನೆ.

ನಿಪಿ 38 ರಿಂದ 47 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 38 ಎ ಯಿಂದ ನಿಪಿ 47 ಎ ಎಂದು ಗುರುತಿಸಲಾಯಿತು.

ಆರೋಪಿಯ ಅಂಕಿ ಬರವಣಿಗೆ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 336 ರಿಂದ ನಿ.ಪಿ 345 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ 336(ಎ) ರಿಂದ ನಿ.ಪಿ 345(ಎ) ಎಂದು ಗುರುತಿಸಲಾಯಿತು.

ಆರೋಪಿಯ ಕನ್ನಡ ಬರವಣಿಗೆಯ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 346 ರಿಂದ ನಿ.ಪಿ 350 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ 346(ಎ) ರಿಂದ ನಿ.ಪಿ 350(ಎ) ಎಂದು ಗುರುತಿಸಲಾಯಿತು.

ಆರೋಪಿಯ ಇಂಗ್ಲೀಷ್ ಬರವಣಿಗೆಯ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 351 ರಿಂದ ನಿ.ಪಿ. 355 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ 351(ಎ) ರಿಂದ ನಿ.ಪಿ 355(ಎ) ಎಂದು ಗುರುತಿಸಲಾಯಿತು.

ಚಾಸಾ 3 ರವರ ಅಂಕಿ ಬರವಣಿಗೆಯ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 356 ರಿಂದ ನಿ.ಪಿ 360 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 356(ಎ) ರಿಂದ ನಿ.ಪಿ 360(ಎ) ಎಂದು ಗುರುತಿಸಲಾಯಿತು.

ಚಾಸಾ3 ರವರ ಕನ್ನಡ ಬರವಣಿಗೆಯ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 361 ರಿಂದ ನಿ.ಪಿ 365 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 361(ಎ) ರಿಂದ ನಿ.ಪಿ 365(ಎ) ಎಂದು ಗುರುತಿಸಲಾಯಿತು.

ಚಾಸಾ 3 ರವರ ಇಂಗ್ಲೀಷ್ ಬರವಣಿಗೆಯ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 366 ರಿಂದ ನಿ.ಪಿ 370 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 366(ಎ) ರಿಂದ ನಿ.ಪಿ 370 (ಎ) ಎಂದು ಗುರುತಿಸಲಾಯಿತು.

ಚಾಸಾ 2 ರವರ ಅಂಕಿ ಬರವಣಿಗೆಯ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 371 ರಿಂದ ನಿ.ಪಿ 375 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 371(ಎ) ರಿಂದ ನಿ.ಪಿ 375 (ಎ) ಎಂದು ಗುರುತಿಸಲಾಯಿತು.

ಚಾಸಾ 2 ರವರ ಕನ್ನಡ ಬರವಣಿಗೆಯ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 376 ರಿಂದ ನಿ.ಪಿ 379 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 376(ಎ) ರಿಂದ ನಿ.ಪಿ 379 (ಎ) ಎಂದು ಗುರುತಿಸಲಾಯಿತು.

ಚಾಸಾ 2 ರವರ ಇಂಗ್ಲೀಷ್ ಬರವಣಿಗೆಯ ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ 380 ರಿಂದ ನಿ.ಪಿ 383 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ 380(ಎ) ರಿಂದ ನಿ.ಪಿ 383 (ಎ) ಎಂದು ಗುರುತಿಸಲಾಯಿತು.

ನಿಪಿ 3 ರಿಂದ ನಿಪಿ 37 ದಾಖಲಾತಿಗಳನ್ನು ನೋಡಿದರೆ  ಗುರುತಿಸಬಲ್ಲೆನು.  ನಿಪಿ 59 ರಿಂದ 253 ದಾಖಲಾತಿಗಳನ್ನು ನೋಡಿದರೆ ಗುರುತಿಸಬಲ್ಲೆನು. ನಿಪಿ 256 ರಿಂದ 309 ದಾಖಲಾತಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲಾತಿಗಳ ಗುರುತಿನ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ. ಮು. ಮಾ. 3 ರಿಂದ 6 ಅನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ**

ದಿಃ 05-10-2009 ರಂದು ಮಹಜರ್ ಪೂರ್ವದಲ್ಲಿ ಪಂಚರಿಗೆ ನೋಟೀಸು ನೀಡಿರುವುದಿಲ್ಲ. ಕೃತ್ಯ ಸ್ಥಳದಲ್ಲಿ ಕರಡು ನಕಾಶೆಯನ್ನು ತಯಾರು ಮಾಡಿರುವುದಿಲ್ಲ.

ದಿಃ 23-11-2009 ರಂದು ನಾನು ಚಾಸಾ 1 ರವರು ಹಾಜರುಪಡಿದ 28 ದಾಖಲಾತಿಗಳು ಯಾರ ಸ್ವಾಧೀನದಲ್ಲಿ ಇದ್ದವು ಎಂದು ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ. ಮಳಲಿ ಗ್ರಾಮ ಪಂಚಾಯ್ತಿಯ ಅಲಮೇರಾದ ಕೀ ಯಾರ ಸ್ವಾಧೀನದಲ್ಲಿ ಇತ್ತು ಮತ್ತು ಸದರಿ ಅಲಮೇರಾ ಮಳಲಿ ಗ್ರಾಮ ಪಂಚಾಯ್ತಿಯ ಯಾವ ಕೊಠಡಿಯಲ್ಲಿ ಇತ್ತು ಎಂದು ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಮಹಜರ್ ಸಮಯದಲ್ಲಿ ಸಾರ್ವಜನಿಕರು ಮತ್ತು ಪಂಚಾಯ್ತಿ ಸದಸ್ಯರು ಯಾರೂ ಹಾಜರಿರಲಿಲ್ಲ. ಪಂಚಾಯ್ತಿ ಯಿಂದ ಅಮಾನತ್ತುಪಡಿಸಿಕೊಂಡ 28 ದಾಖಲಾತಿಗಳಿಗೆ ಮೊಹರು ಮಾಡಿ, ಪಂಚರ ಸಹಿ ಇರುವ ಚೀಟಿ ಅಂಟಿಸಿರುವುದಿಲ್ಲ ಎಂದರೆ ಸರಿ.

ದಿಃ 19-11-2009 ರಂದು ಅಮಾನತ್ತುಪಡಿಸಿಕೊಂಡಿದ್ದ ಕಾರ್ಪೋರೇಷನ್ ಬ್ಯಾಂಕಿನಲ್ಲಿ ಚಾಸಾ 16 ರವರು ಹಾಜರುಪಡಿಸಿದ ಎರಡು ಬ್ಯಾಂಕ್ ಖಾತೆಯ ದಾಖಲಾತಿಗಳನ್ನು ಹಾಜರುಪಡಿಸುವಂತೆ ಚಾಸಾ 16 ರವರಿಗೆ ನೋಟೀಸು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 16 ರವರು ಹಾಜರುಪಡಿಸಿದ ಎರಡು ಬ್ಯಾಂಕ್ ಖಾತೆಗಳ ದಾಖಲಾತಿಯನ್ನು ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ಪಂಚರ ಸಹಿ ಇರುವ ಚೀಟಿಯನ್ನು ಸದರಿ ದಾಖಲಾತಿಗಳಿಗೆ ಅಂಟಿಸಿರುವುದಿಲ್ಲ. ಮಳಲಿ ಪಂಚಾಯ್ತಿ ಮತ್ತು ಬ್ಯಾಂಕಿನಲ್ಲಿ ಮಾಡಿರುವ ಮಹಜರ್ ಕಾಲದಲ್ಲಿ ನಾನು ಛಾಯಾಚಿತ್ರಗಳನ್ನು ತೆಗೆಸಿರುವುದಿಲ್ಲ.

ದಿಃ 05-03-2010 ರಂದು ನಾಲ್ಕು ಸೀಲುಗಳನ್ನು ಅಮಾನತ್ತುಪಡಿಸಿಕೊಳ್ಳುವ ಸಮಯದಲ್ಲಿ ಪ್ರತ್ಯೇಕವಾಗಿ ಪ್ರತಿ ಸೀಲಿಗೆ ಮೊಹರು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾಲ್ಕೂ ಸೀಲುಗಳನ್ನು ಒಂದೇ ಕವರ್ ನಲ್ಲಿ ಹಾಕಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ 19 ಮತ್ತು 20 ರವರಿಗೆ ನೋಟೀಸು ನೀಡಿ ಮಹಜರ್ ಗೆ ಬರಮಾಡಿಕೊಂಡಿರುತ್ತೇನೆ. ಚಾಸಾ 19 ಮತ್ತು 20 ರವರಿಗೆ ಯಾವುದೇ ನೋಟೀಸು ನೀಡದೇ ಪೊಲೀಸ್ ಠಾಣೆಯಲ್ಲಿಯೇ ದಿಃ 05-03-2010 ರ ಮಹಜರನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

ದಿಃ 10-08-2010 ರಂದು ಚಾಸಾ 21 ಮತ್ತು 22 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡ ಎರಡು ಪುಸ್ತಕಗಳನ್ನು ಮೊಹರು ಮಾಡಿ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುವುದಿಲ್ಲ ಎಂದರೆ ಸರಿ. ನಿಪಿ 336 ರಿಂದ ನಿಪಿ 345 ದಾಖಲಾತಿಗಳಿಗೆ ಪ್ರತ್ಯೇಕ ನಂಬರ್ ನೀಡಿರುವುದಿಲ್ಲ ಎಂದರೆ ಸರಿ. ನಿಪಿ 346 ರಿಂದ 350 ದಾಖಲಾತಿಗಳಿಗೆ ಪುಟ ಸಂಖ್ಯೆ ನೀಡಿರುವುದಿಲ್ಲ ಎಂದರೆ ಸರಿ. ನಿಪಿ 351 ರಿಂದ 383 ದಾಖಲಾತಿಗಳಿಗೆ ಪುಟ ಸಂಖ್ಯೆ ನೀಡಿರುವುದಿಲ್ಲ ಎಂದರೆ ಸರಿ.

ಮಳಲಿ ಪಂಚಾಯ್ತಿ ಸದಸ್ಯರ ಮಾತನ್ನು ಕೇಳಿಕೊಂಡು ಮಹಜರನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ದಿಃ 05-10-2009 , ದಿಃ 12-11-2009, 19-11-2009, 23-11-2009 , 05-03-2010, 10-08-2010 ರ ಮಹಜರ್ ಗಳನ್ನು ನಾನು ಠಾಣೆಯಲ್ಲಿಯೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ದಾಖಲಾತಿಗಳನ್ನು ಸೃಷ್ಟಿಸಿ , ಎಫ್ ಎಸ್ ಎಲ್ ಗೆ ಕಳುಹಿಸಿ ಸುಳ್ಳು ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಸಲ್ಲಿಸಿರುವ ಸುಳ್ಳು ದೋಷಾರೋಪಣಾ ಪಟ್ಟಿಗೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ